ಲಿಮಿಟೆಡ್ ಇವರು ನಿರ್ಮಿಸಿರುವ ಸ್ಥಳದ ಮಾರಾಟಕ್ಕೆ ಸಂಬಂಧಿಸಿದ ವ್ಯವಹಾರಗಳಿಗೆ, 2ನೇ ಬಾರಿ ಆಸ್ತಿ ವರ್ಗಾವಣೆ ನೋಂದಣಿಗಾಗಿ ತಗಲುವ ಮುದ್ರಾಂಕ ಶುಲ್ಕಕ್ಕೆ ಶೇಕಡ 50 ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ ನೀಡಿ ದಿನಾಂಕ 16-6-99ರಂದು ಹೊರಡಿಸಿದ ಕಂಇ 407 ಮುನೋಮು 98ನೇ ಸಂಖ್ಯೆಯ ಆದೇಶಗಳನ್ನು ಮಂಡಿಸುವುದು.

XIV. ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಅವರು:

**1987ರ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಅಧಿನಿಯಮ ಕಾಯ್ದೆ 18 (4)ರ ಮೇರೆಗೆ;**

1. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 1997-98ನೇ ಸಾಲಿನ ವಾರ್ಷಿಕ ವರದಿ;

2. ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ 1998-99ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

XV ಶ್ರೀ ಡಿ.ಕೆ.ಶಿವಕುಮಾರ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ,

**ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ.**

1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ನಿಯಮ 28 (ಎ), 29(ಎಫ್) ಇವುಗಳಿಗೆ ತಿದ್ದುಪಡಿ ಮಾಡಿ ಹಾಗೂ 30(ಬಿ) ಮತ್ತು 53(ಎ) ನಿಯಮಗಳನ್ನು ಕಾಯಿದೆಗೆ ಹೊಸದಾಗಿ ಸೇರ್ಪಡೆಗೊಳಿಸಿ ದಿನಾಂಕ 25-2-2000ದಂದು ಹೊರಡಿಸಿದ ಡಿಪಿಎಆರ್ 47 ಶಾಸನ 99ನೇ ಸಂಖ್ಯೆಯ ಅಧ್ಯಾದೇಶ

**1962 ಉಗ್ರಾಣ ನಿಗಮಗಳ ಕಾಯ್ದೆಯ 31(11)ನೇ ಪ್ರಕರಣದ ಮೇರೆಗೆ.**

2. ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 1997-98ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

XVI ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ,

**ಕೃಷಿ ವಿಶ್ವವಿದ್ಯಾಲಯ ಕಾಯ್ದೆ 8(9) ರ ಕಲಂ ಮೇರೆಗೆ;**

1. ಅಸಿಸ್ಟೆಂಟ್ ಪ್ರೊಫೆಸರ್ ಕನ್ನಡ (ತಾಂತ್ರಿಕ) ಮತ್ತು ಪ್ರೊಫೆಸರ್ ಅನಿಮಲ್